# ಫೋಟೊಗ್ರಫಿ ಆಸಕ್ತರಿಗೆ 'ನಿಕಾನ್' ಆನ್‌ಲೈನ್ ತರಬೇತಿ

ಕ್ಯಾಮೆರಾ ತಯಾರಕ ಕಂಪನಿ 'ನಿಕಾನ್ ಇಂಡಿಯಾ ಪ್ರೈವೇಟ್ ಲಿಮಿಟೆಡ್' ಈ ತಿಂಗಳ ಅಂತ್ಯದವರೆಗೆ ಆನ್‌ಲೈನ್ ಮೂಲಕ ಉಚಿತ ಫೋಟೊಗ್ರಫಿ ತರಗತಿ ಆಯೋಜಿಸಿದೆ. ಛಾಯಾಗ್ರಾಹಕ ರಘು ರೈ ಸೇರಿದಂತೆ ಖ್ಯಾತ ಛಾಯಾಗ್ರಾಹಕರು ತರಗತಿಗಳನ್ನು ನಡೆಸಿಕೊಡಲಿದ್ದಾರೆ.

ತರಬೇತಿಯಲ್ಲಿ ವಿವಾಹ, ವೈಲ್ಡ್ ಲೈಫ್, ಫೋಕಲ್ ಲೆನ್ಸ್ ಎಫೆಕ್ಟ್, ಇಂಟೀರಿಯರ್–ಆರ್ಕಿಟೆಕ್ಚರ್, ಸ್ಟ್ರೀಟ್, ಪೋರ್ಟ್ರೈಟ್, ಫುಡ್ ಮತ್ತು ಪೆಟ್ ಫೋಟೊಗ್ರಫಿ ಸೇರಿದಂತೆ ಹಲವಾರು ವಿಷಯಗಳ ಬಗ್ಗೆ ತಿಳಿಸಿಕೊಡಲಾಗುತ್ತದೆ. ತರಬೇತಿ ವೇಳೆ ಪ್ರಶ್ನೋತ್ತರಕ್ಕೂ ಅವಕಾಶವಿದ್ದು, ಶಿಬಿರಾರ್ಥಿಗಳ ಪ್ರಶ್ನೆಗಳು ಮತ್ತು ಅನುಮಾನಗಳಿಗೆ ತಜ್ಞರು ಸೂಕ್ತ ಉತ್ತರ ನೀಡಲಿದ್ದಾರೆ.

ಆನ್‌ಲೈನ್ ತರಗತಿಗಳು ನಿಕಾನ್‌ನ ಅಧಿಕೃತ ಇನ್‌ಸ್ಟಾಗ್ರಾಂ, ಫೇಸ್‌ಬುಕ್ ಮತ್ತು ಯೂಟ್ಯೂಬ್



ಪೇಜ್‌ಗಳಲ್ಲಿ ಲೈವ್ ವಿಡಿಯೊ ಸ್ಟ್ರೀಮಿಂಗ್‌ನಲ್ಲಿ ಲಭ್ಯ. 'ಫೋಟೊಗ್ರಫಿ ಸಮುದಾಯವನ್ನು ಪ್ರಬಲಗೊಳಿಸುವುದು ನಿಕಾನ್‌ನ ಪ್ರಮುಖ ಗುರಿ. ಕೊರೊನಾ ಭೀತಿಯಿಂದಾಗಿ ಜನರು ಮನೆ ಸೇರಿದ್ದಾರೆ. ಅವರಲ್ಲಿ ಫೋಟೊಗ್ರಫಿ ಕಲಿಕೆಯ ಬಗ್ಗೆ ಉತ್ಸಾಹ ಇರುವವರಿಗೆ ನೆರವಾಗುವ ದೃಷ್ಟಿಯಿಂದ ತರಗತಿಗಳನ್ನು ಆಯೋಜಿಸಲಾಗಿದೆ' ಎಂದು ನಿಕಾನ್ ಇಂಡಿಯಾ ವ್ಯವಸ್ಥಾಪಕ ನಿರ್ದೇಶಕ ಸಜ್ಜನ್ ಕುಮಾರ್ ಹೇಳಿದ್ದಾರೆ.

ತರಗತಿಗಳಲ್ಲಿ ಭಾಗಿಯಾದವರು ತಾವು ಸೆರೆಹಿಡಿದ ಛಾಯಾಚಿತ್ರಗಳನ್ನು 'ಕ್ಯಾಪ್ಚರ್ ವಿತ್ ನಿಕಾನ್'ನಲ್ಲಿ (Capture with Nikon) ಅಪ್ ಲೋಡ್ ಮಾಡುವ ಮೂಲಕ ಇಡೀ ಜಗತ್ತಿಗೆ ಅವುಗಳನ್ನು ತೋರಿಸಬಹುದು. ಅಂತರರಾಷ್ಟ್ರೀಯ ಮಟ್ಟದ ಪರಿಣತರೊಂದಿಗೆ ಸಂಪರ್ಕ ಸಾಧಿಸಬಹುದು. ಇತರರ ಕೆಲಸಗಳನ್ನು ಅನ್ವೇಷಿಸಬಹುದು ಮತ್ತು ಆಕರ್ಷಕ ಬಹುಮಾನಗಳನ್ನೂ ಪಡೆಯಬಹುದು.

ಆಸಕ್ತರು ನಿಕಾನ್‌ನ ಅಧಿಕೃತ ವೆಬ್‌ಸೈಟ್‌ಗೆ (nikonschool.in) ಭೇಟಿ ಕೊಟ್ಟು ಲಾಗಿನ್ ಆಗಬೇಕು. ಬಳಿಕ ತಮ್ಮ ಹೆಸರು ನೋಂದಾಯಿಸಿಕೊಂಡು ಆನ್‌ಲೈನ್ ತರಬೇತಿಗಳಲ್ಲಿ ಭಾಗಿಯಾಗಬಹುದು. ■

## ಜೂಮ್ ಮಾಹಿತಿ ಸೋರಿಕೆ



ಕೊರೊನಾ ವೈರಸ್ ಇಡೀ ವಿಶ್ವವನ್ನೇ ವ್ಯಾಪಿಸಿದ ಬಳಿಕ ಸಾರ್ವಜನಿಕರು ಹೊರಗೆ ಬಾರದೆ ಮನೆ ಸೇರಿಕೊಂಡಿದ್ದಾರೆ. ಈ ಅವಧಿಯಲ್ಲಿ ವಿಡಿಯೊ ಕಾಲ್ ಸೇವೆ ಒದಗಿಸಿ ಇದ್ದಕ್ಕಿದ್ದಂತೆ ಜನಪ್ರಿಯತೆ ಪಡೆದುಕೊಂಡಿದ್ದ 'ಜೂಮ್ ಆ್ಯಪ್' ತನ್ನ ಬಳಕೆದಾರರ ಮಾಹಿತಿ ಸೋರಿಕೆ ಆರೋಪಕ್ಕೆ ಮತ್ತೆ ಗುರಿಯಾಗಿದೆ. ಇಂತಹದ್ದೊಂದು ಆರೋಪವು ಈ ಮೊದಲೂ ಕೇಳಿಬಂದಿತ್ತು.

'ಜೂಮ್ ಆ್ಯಪ್ ಸುರಕ್ಷಿತವಲ್ಲ. ಅದರಲ್ಲಿ ಸಾಕಷ್ಟು ಲೋಪದೋಷಗಳಿವೆ ಎಂದು ಸೈಬರ್ ಸೆಕ್ಯುರಿಟಿ ತಜ್ಞರು ಹೇಳುತ್ತಾ ಬಂದಿದ್ದರೂ, ಜನರು ಅತ್ಯಧಿಕ ಸಂಖ್ಯೆಯಲ್ಲಿ ಈ ಆ್ಯಪ್ ಬಳಕೆ ಮಾಡುತ್ತಿದ್ದಾರೆ. ಈಚೆಗೆ ಆ್ಯಪ್‌ನಲ್ಲಿ ಬಗ್ ಒಂದು ಕಾಣಿಸಿಕೊಂಡಿದ್ದು ಅದರಿಂದಾಗಿಯೇ ಮಾಹಿತಿ ಸೋರಿಕೆಯಾಗುತ್ತಿದೆ ಎನ್ನಲಾಗಿದೆ.

ಈ ಆ್ಯಪ್‌ನ ಲಾಗಿನ್ ವಿಧಾನ ಅತ್ಯಂತ ಸರಳ. ಶುಲ್ಕರಹಿತವಾದ ಸೇವೆ ನೀಡುತ್ತಿರುವ ಇದರಲ್ಲಿ ವಿಡಿಯೊ ಮತ್ತು ಆಡಿಯೊ ಕಾಲಿಂಗ್ ಸೌಲಭ್ಯವಿದೆ. ಒಮ್ಮೆಗೆ ಸುಮಾರು 100 ಜನರು ಸೇರಿಕೊಳ್ಳಬಹುದಾದ ವಿಡಿಯೊ ಕಾಲಿಂಗ್ ವ್ಯವಸ್ಥೆಯೂ ಇದೆ. ಇದೆಲ್ಲ ಕಾರಣಕ್ಕೆ ತ್ವರಿತ ಸಮಯದಲ್ಲಿ ಆ್ಯಪ್ ಸಾಕಷ್ಟು ಜನಪ್ರಿಯತೆ ಪಡೆದುಕೊಂಡಿದೆ.

ಈಚೆಗೆ ಆ್ಯಪ್‌ನಲ್ಲಿ ಕಾಣಿಸಿಕೊಂಡ ಕೆಲವೊಂದು ತಾಂತ್ರಿಕ ಸಮಸ್ಯೆಗಳನ್ನೇ ಬಳಸಿಕೊಂಡು ಹ್ಯಾಕರ್‌ಗಳು ಬಳಕೆದಾರರ ವಿವರ ಕದ್ದಿದ್ದಾರೆ ಎನ್ನಲಾಗಿದೆ. ಸುಮಾರು 5 ಲಕ್ಷಕ್ಕೂ ಅಧಿಕ ಬಳಕೆದಾರರ ವಿವರ ಆನ್‌ಲೈನ್ ಸೋರಿಕೆಯಾಗಿದ್ದು, ಖಾತೆ ವಿವರ ಮಾತ್ರವಲ್ಲದೆ ಆ್ಯಪ್ ಬಳಸುತ್ತಿರುವವರ ವೆಬ್‌ಕ್ಯಾಮ್, ಮೈಕ್ರೋಫೋನ್ ಅನ್ನು ಕೂಡ ಹ್ಯಾಕರ್‌ಗಳು ಸುಲಭವಾಗಿ ಹ್ಯಾಕ್ ಮಾಡಿ ಮಾಹಿತಿ ಕದ್ದಿದ್ದಾರೆ. ಆ ವಿವರ ಡಾರ್ಕ್‌ನೆಟ್ ವೆಬ್ ಮತ್ತು ಹ್ಯಾಕರ್ಸ್ ಫೋರಂ ಮೂಲಕ ಬಹಿರಂಗವಾಗುತ್ತಿವೆ.

ಈ ಆ್ಯಪ್, ಕಚೇರಿಗಳಲ್ಲಿ ಟ್ರೈನಿಂಗ್‌ಗೆ ಹಾಗೂ ಮೀಟಿಂಗ್‌ಗೆ ಹೆಚ್ಚು ಅನುಕೂಲ. ಹೀಗಾಗಿಯೇ ವಿವಿಧ ಕಂಪನಿಗಳು ತಮ್ಮ ಉದ್ಯೋಗಿಗಳಿಗೆ ಈ ಆ್ಯಪ್ ಅನ್ನು ಬಳಸುವಂತೆ ಸೂಚಿಸಿವೆ. ಮಾಹಿತಿ ಸೋರಿಕೆಯ ಭೀತಿಯಿಂದಾಗಿ ಆ್ಯಪ್ ಅನ್ನೇ ಡಿಲಿಟ್ ಮಾಡುವ ಸ್ಥಿತಿಗೆ ಬಳಕೆದಾರರು ತಲುಪಿದ್ದಾರೆ. ■

## 'ಇನ್‌ಸ್ಟಾ' ಡೆಸ್ಕ್‌ಟಾಪ್ ಮೆಸೇಜ್

ವಾಟ್ಸ್‌ಆ್ಯಪ್‌ನಂತೆಯೇ ಇನ್‌ಸ್ಟಾಗ್ರಾಂನಲ್ಲೂ ಡೆಸ್ಕ್‌ಟಾಪ್ ಡೈರೆಕ್ಟ್ ಮೆಸೇಜ್ ಆಯ್ಕೆಯನ್ನು ಇನ್‌ಸ್ಟಾಗ್ರಾಂ ತನ್ನ ಬಳಕೆದಾರರಿಗೆ ನೀಡಿದೆ.

ಇಷ್ಟು ದಿನ ಆಂಡ್ರಾಯ್ಡ್ ಮತ್ತು ಐಒಎಸ್ ಆವೃತ್ತಿಯ ಸ್ಮಾರ್ಟ್‌ಫೋನ್‌ನ ತನ್ನ ಆ್ಯಪ್‌ನಲ್ಲಿ ಮಾತ್ರ ಇನ್‌ಸ್ಟಾಗ್ರಾಂ ಡೈರೆಕ್ಟ್ ಮೆಸೇಜ್ ಆಯ್ಕೆ ಸೀಮಿತವಾಗಿತ್ತು. ಈಗ ಆ ಆಯ್ಕೆ ಡೆಸ್ಕ್‌ಟಾಪ್‌ನಲ್ಲೂ ಲಭ್ಯವಿದೆ. ಇನ್‌ಸ್ಟಾಗ್ರಾಂ ವೆಬ್ ಆಕ್ಸೆಸ್ ಮೂಲಕ ಬಳಕೆದಾರರು ಕಂಪ್ಯೂಟರ್ ಅಥವಾ ಲ್ಯಾಪ್‌ಟಾಪ್‌ನಲ್ಲಿ ಮತ್ತೊಬ್ಬರಿಗೆ ನೇರ ಸಂದೇಶ ಕಳುಹಿಸಬಹುದು.

ಈ ಮೊದಲು ಲ್ಯಾಪ್‌ಟಾಪ್ ಅಥವಾ ಡೆಸ್ಕ್‌ಟಾಪ್ ಕಂಪ್ಯೂಟರ್‌ನಲ್ಲಿ ಬರೀ ಇನ್‌ಸ್ಟಾಗ್ರಾಂ ವೀಕ್ಷಿಸಲು, ಅಲ್ಲಿ ಕಾಣುವ ಫೋಟೊಗಳು–ವಿಡಿಯೊಗಳಿಗೆ ಲೈಕ್ ಮಾಡಲು ಮತ್ತು ಕಮೆಂಟ್ ಮಾಡಲು ಮಾತ್ರ ಅವಕಾಶವಿತ್ತು. ಆದರೆ ಮೆಸೇಜ್ ಕಳುಹಿಸಲು ಅವಕಾಶವಿರಲಿಲ್ಲ.

ಈ ಬಗ್ಗೆ ಟ್ವೀಟ್ ಮಾಡಿರುವ ಇನ್‌ಸ್ಟಾಗ್ರಾಂ, 'ಎಲ್ಲ ಬಳಕೆದಾರರಿಗೂ ಹಂತ ಹಂತವಾಗಿ ಇನ್‌ಸ್ಟಾಗ್ರಾಂ ವೆಬ್ ಡಿಎಂ ಆಯ್ಕೆಯನ್ನು ಒದಗಿಸುತ್ತಿದ್ದೇವೆ. ನೀವು ಎಲ್ಲೇ ಇದ್ದರೂ ಈ ವಿಶೇಷ ಆಯ್ಕೆ ಬಳಸಿ, ನಿಮ್ಮಿಷ್ಟದವರಿಗೆ ಮೆಸೇಜ್ ಕಳುಹಿಸಬಹುದು' ಎಂದು ಹೇಳಿದೆ.

■ **ಶಶಿಕುಮಾರ್ ಸಿ.**